· ದಿನಾಂಕ : 5/11/2018

· ಚಿಕ್ಕೋಡಿ - ಸದಲಗಾ

ಹಾಗೂ ನಿಪ್ಪಾಣಿ

# ತಹಸೀಲ್ದಾರ್ ಕಚೇರಿಗೆ ಮೇಘಣ್ಣವರ ಭೇಟಿ

■ ವಿಜಯವಾಣಿ ಸುದ್ದಿಜಾಲ ಚಿಕ್ಕೋಡಿ

ಪಟ್ಟಣದ ತಹಸೀಲ್ದಾರ್ ಕಚೇರಿಗೆ ಸೋಮವಾರ ಬೆಳಗಾವಿ ಪ್ರಾದೇಶಿಕ ಆಯುಕ್ತ ಪಿ.ಎ.ಮೇಘಣ್ಣವರ ಭೇಟಿ ನೀಡಿ ಪರಿಶೀಲಿಸಿದರು.

ನಂತರ ಅಲ್ಲಿನ ಅವ್ಯವಸ್ಥೆ ಹಾಗೂ ಕಾರ್ಯವೈಖರಿ ಕುರಿತು ಅಸಮಾಧಾನ ವ್ಯಕ್ತಪಡಿಸಿದರು. ಎನ್ರೀ ಒಬ್ಬರು ಮಾಡುವ ಕೆಲಸವನ್ನು ನಾಲ್ಕು ಜನ ಹಂಚಿಕೊಂಡಿದ್ದೀರಿ. ನೀವೇನು ಸಾರ್ವಜನಿಕರ ಕೆಲಸ ಮಾಡುತ್ತೀರೋ ಅಥವಾ ಹರಟೆ ಹೊಡೆಯುತ್ತ ಕಾಲ ಕಳೆಯುತ್ತೀರೋ ಎಂದು ಚಿಕ್ಕೋಡಿ

» ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡ ಬೆಳಗಾವಿ ಪ್ರಾದೇಶಿಕ ಆಯುಕ್ತರು

ತಹಸೀಲ್ದಾರ್ ಅವರನ್ನು ಆಯುಕ್ತರು ತರಾಟೆಗೆ ತೆಗೆದುಕೊಂಡರು. ಬಳಿಕ ತಹಸೀಲ್ದಾರ್ ಕಚೇರಿ ಸಿಬ್ಬಂದಿಯ ಕೊಠಡಿಗಳಿಗೆ ಭೇಟಿ ನೀಡಿ ಕಡತಗಳನ್ನು ಪರಿಶೀಲಿಸಿ ಅಲ್ಲಿರುವ ಅವ್ಯವಸ್ಥೆ ಕಂಡು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಅಧಿಕಾರಿಯೊಬ್ಬ ನಾನು ಹೊಸಬ ಪ್ರಭಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ ಎಂದು ಹಾರಿಕೆ ಉತ್ತರ ನೀಡಿದರು. ನೀವು ಶಿರಸ್ತೇದಾರರು ಸಿಬ್ಬಂದಿಯಿಂದ ಕೆಲಸ ಮಾಡಿಸಿಕೊಳ್ಳಬೇಕು. ನಿತ್ಯ ಸಿಬ್ಬಂದಿ ಮಾಡಿರುವ ಕೆಲಸದ ಕುರಿತು ನಿಗಾ ವಹಿಸಬೇಕು ಎಂದು ಸೂಚಿಸಿದರು.

ಕೆಲ ಅರ್ಜಿಗಳ ಮೇಲೆ ತಹಸೀಲ್ದಾರ್ ಸಹಿ ಇಲ್ಲ. ಹೀಗಾದರೆ ಹೇಗೆ? ಬರುವ ದಿನಗಳಲ್ಲಿ ಈ ರೀತಿಯಾಗಿ ತಪ್ಪಾಗದಂತೆ ನೋಡಿಕೊಳ್ಳಬೇಕು. ಚಿಕ್ಕೋಡಿ ಎಸಿಯಾಗಿ ಅಧಿಕಾರ ವಹಿಸಿಕೊಂಡಿರುವ ರವೀಂದ್ರ ಕರಲಿಂಗನವರ ಅವರು ತಹಸೀಲ್ದಾರ್ ಕಚೇರಿ ಹಾಗೂ ತಮ್ಮ ಕಚೇರಿ ಸಿಬ್ಬಂದಿ ಕೆಲಸದ ಬಗ್ಗೆ ನಿಗಾವಹಿಸಬೇಕು ಎಂದು ಮೇಘಣ್ಣವರ ಸೂಚನೆ ನೀಡಿದರು. ಉಪವಿಭಾಗಾಧಿಕಾರಿ ರವೀಂದ್ರ ಕರಲಿಂಗನವರ, ತಹಸೀಲ್ದಾರ್ ಶ್ರೀನಿವಾಸ ಗೌಡ, ಇತರರು ಇದ್ದರು.

ವಿಜಯವಾಣಿ ಚಿತ್ರ



ಚಿಕ್ಕೋಡಿ ತಹಸೀಲ್ದಾರ್ ಕಚೇರಿಗೆ ಪ್ರಾದೇಶಿಕ ಆಯುಕ್ತ ಮೇಘಣ್ಣವರ ಭೇಟಿ ನೀಡಿ ಕಡತ ಪರಿಶೀಲಿಸಿದರು.

Scanned by CamScanner

# ಮನೆ ಮನೆಗೆ ತೆರಳಿ ಸರಿಯಾದ ಮಾಹಿತಿ ಸಂಗ್ರಹಿಸಿ: ಮೇಘಣ್ಣವರ

• **ಕನ್ನಡಪ್ರಭ ವಾರ್ತೆ** ಚಿಕ್ಕೋಡಿ

ಪರಿಶುದ್ಧವಾದ ಮತದಾರರ ಪಟ್ಟಿ ಪ್ರಕಟಗೊಳ್ಳಬೇಕಾದರೇ ಬಿಎಲ್‌ಒಗಳು ಕಡ್ಡಾಯವಾಗಿ ತಮ್ಮ ಮತಗಟ್ಟೆ ವ್ಯಾಪ್ತಿಯಲ್ಲಿ ಮನೆ ಮನೆಗೆ ತೆರಳಿ ಸರಿಯಾದ ಮಾಹಿತಿ ಸಂಗ್ರಹಿಸಬೇಕು ಎಂದು ಪ್ರಾದೇಶಿಕ ಆಯುಕ್ತ ಮತ್ತು ಬೆಳಗಾವಿ ಜಿಲ್ಲಾ ಮತದಾರರ ಪಟ್ಟಿ ವೀಕ್ಷಣಾಧಿಕಾರಿ ಪಿ.ಎ.ಮೇಘಣ್ಣವರ ಹೇಳಿದರು.

ಇಲ್ಲಿನ ಮಿನಿವಿಧಾನ ಸೌದದಲ್ಲಿ ಸೋಮವಾರಕರೆದಪತ್ರಿಕಾಗೋಷ್ಠಿಯಲ್ಲಿಮಾತನಾಡಿದ ಅವರು, ಬಿಎಲ್‌ಒಗಳು ಮನೆ ಮನೆಗೆ ಹೋಗದಿರುವುದು ಕಂಡು ಬಂದಿದೆ. ಕೆಲವೆಡೆ ಬಿಎಲ್‌ಒಗಳು ಯಾರೂ ಎಂಬುದೇ ಗೊತ್ತಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

ನಿರೀಕ್ಷಿತ ಮಟ್ಟದಲ್ಲಿ ಬಿಎಲ್‌ಒಗಳಿಂದ ಕೆಲಸವಾಗಿಲ್ಲ. ಆದ್ದರಿಂದ ಶೀಘ್ರ ಬಿಎಲ್‌ಒಗಳಿಗೆ ಒಂದು ತರಬೇತಿ ಏರ್ಪಡಿಸುವ ಮೂಲಕ ಈ ವ್ಯವಸ್ಥೆ ಸುಧಾರಣೆ ಮಾಡಲಾಗುವುದು. ಮತದಾರರ ನೋಂದಣಿ ಅಧಿಕಾರಿಯನ್ನಾಗಿ ಉಪವಿಭಾಧಿಕಾರಿಗಳನ್ನು ಮತ್ತು ಸಹಾಯಕ ಮತದಾರರ ನೋಂದಣಿ ಅಧಿಕಾರಿಯನ್ನಾಗಿ ತಹಸೀಲ್ದಾರರನ್ನು ನೇಮಕ ಮಾಡಲಾಗಿದೆ ಎಂದರು. ಮತದಾರರ ಪಟ್ಟಿಯಲ್ಲಿ ಏನಾದರೂ ಆಕ್ಷೇಪಣೆ ಇದ್ದಲ್ಲಿ ಡಿ.20 ರೊಳಗೆ ಸಲ್ಲಿಸಬೇಕು. ಪರಿಶುದ್ಧವಾದ ಅಂತಿಮ ಮತದಾರರ ಪಟ್ಟಿ ಜ. 4 ರಂದು ಪ್ರಕಟಗೊಳ್ಳಲಿದೆ ಎಂದು ಹೇಳಿದರು. ಉಪವಿಭಾಗಾಕಾರಿ ರವೀಂದ್ರ ಕರಲಿಂಗನ್ನವರ, ಪ್ರವೀಣ ಬಾಗೇವಾಡಿ, ಎ.ಎಸ್.ಪಾಟೀಲ, ಅರುಣ ಶ್ರೀಖಂಡೆ ಮುಂತಾದವರು ಉಪಸ್ಥಿತರಿದ್ದರು.



Scanned by CamScanner